MYSORE LEGISLATIVE ASSEMBLY

ELEVENTH DAY

Tuesday, 10th March 1964.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Quota of Sugar allotted to Mysore State after the Promulgation of Sugar Control Order.

*Q.—71. SRI B. BHASKAR SHETTY (Kaup).—

Will the Government be pleased to state :—

(*a*) the quota of sugar allotted to the Mysore State, after the promulgation of Sugar Control Order;

(*b*) the quantity of sugar distributed in the State since then (District-wise information may be furnished) ;

(*c*) the basis on which the sugar was distributed to the public consumers and the merchant organisations in the State ?

(*d*) whether they have maintained equitable supply and distribution of sugar throughout the State ?

A.—SRI M. V. KRISHNAPPA (Minister for Revenue).—

(*a*) *Date of Release*		*Quantity released (in tonnes)*
17—4—1963	...	9,000
17—5—1963	...	9,000
17—6—1963	...	9,400
17—7—1963	...	4,649
29—7—1963	...	8,187
30—8—1963	...	9,392
1—10—1963	...	5,778
22—10—1963	...	5,671
9—11—1963	...	4,768
22—11—1963	...	9,000
22—12—1963	...	9,000
23—1—1964	...	9,000
14—2—1964	...	900
23—2—1964	...	9,000
Total	...	1,02,745

(SRI M. V. KRISHNAPPA)

(*b*) *Vide* statement given below.

(*c*) In the case of *bona fide* consumers sugar is being distributed with reference to the quota allotted to the State and the availability of the stocks taking into consideration the local conditions and requirements.

Quotas to bulk consumers are fixed on the basis of availability of stock as well as their turn-over as far as possible.

(*d*) Yes, subject to the allotments given by the Government of India.

Statement showing the allotment of Sugar made to the several Districts commencing from 17th April 1963 to the end of 22nd November 1963.

(Figures in tonnes).

Sl. No.	*Name of the District*	*Release on 17th April* 1963	*Release on 17th May* 1963	*Release on 17th June* 1963	*Release on 17th July* 1963	*Release on 29th July* 1963	*Release on 30th August* 1963	*Release on 1st October* 1963	*Release on 22nd October* 1963	*Release on 9th November* 1963	*Release on 22nd November* 1963
1	2	3	4	5	6	7	8	9	10	11	12
1	Bangalore City ..	1,500	1,500	1,500	119	1,300	1,500	885	865	500	1,590
2	Bangalore Urban ..	65	65	81	40	60	81	50	50		
3	Bangalore Rural ..	273	300	300	150	250	300	180	180	180	300
4	Mysore City ..	350	350	350	200	390	400	217	350	200	600
5	Mysore District ..	210	250	250	125	210	230	120	150	100	
6	Coorg District ..	80	90	90	45	80	90	54	60	90	90
7	Mandya District ..	210	210	250	125	210	250	166	175	180	200
8	South Kanara District	550	575	775	375	511	575	280	250	200	600
9	Hassan District ..	120	175	200	100	170	200	120	140	180	175
10	Shimoga District ..	256	280	288	156	270	305	200	250	80	300
11	Tumkur District ..	230	250	280	140	240	280	186	160	180	250
12	Kolar including K.G.F.	122	250	280	140	240	280	202	160	260	300
13	Chitradurga District ..	250	275	325	165	280	325	187	200	180	300
14	Chickmagalur District	115	144	146	73	130	140	98	100	150	150
15	Bellary District ..	230	250	270	150	265	200	200	160	180	275
16	Dharwar District ..	780	780	820	434	720	900	509	365	250	852
17	Bijapur District ..	625	600	600	300	530	600	400	454	160	600
18	Belgaum District ..	877	850	850	433	750	850	480	430	220	800
19	North Kanara District	325	350	550	275	411	300	150	180	180	200
20	Bidar District ..	150	160	160	80	140	160	115	78	120	150
21	Gulbarga District ..	250	463	431	215	380	431	241	240	183	400
22	Raichur District ..	335	340	340	171	300	340	226	160	180	300
23	Factory Employees including Cane growers of Sugar and Sankeswar Factories.	60	85	64	36	68	85	79	31	39	50

(SRI M. V. KRISHNAPPA)

Statement showing the allotment of Sugar made to several Districts commencing from 22nd December 1963 to end of 22nd February 1964. (In tonnes.)

Sl. No.	Name of the District	Release on 22-12-63	Release on 23-1-64	Special release on 14-2-64	Release on 23-2-64
1	Bangalore City including Urban District ...	1,580	1,600	191	1,600
2	Bangalore Rural ...	300	300	30	300
3	Mysore City and District ...	600	600	60	600
4	Mandya ...	200	200	20	200
5	Coorg ...	90	90	10	90
6	Hassan ...	175	175	20	175
7	Chickmagalur ...	150	180	18	180
8	Tumkur ...	250	250	25	250
9	Kolar including K.G.F. ...	300	300	30	300
10	Shimoga ...	361	360	35	360
11	Bellary ...	275	275	27	275
12	South Kanara ...	600	620	62	620
13	Chitradurga ...	300	300	30	300
14	Raichur ...	300	300	30	300
15	Bidar ...	250	250	25	250
16	Gulbarga ...	400	374	37	351
17	North Kanara ...	200	250	25	250
18	Dharwar ...	850	850	85	850
19	Belgaum ...	800	830	80	800
20	Bijapur ...	600	600	60	600
21	Factory Employees and Cane Growers.	71	76	...	64

ಶ್ರೀ ಬಿ. ಭಾಸ್ಕರಶೆಟ್ಟಿ.—ನಕ್ಕರೆ ರಾಜ್ಯದಿಂದ ಹೆಚ್ಚಾಗಿ ಹೊರಗೆ ಹೋಗಿ ಬ್ಲಾಕುಮಾರ್ಕೆಟ್ ಆಗುತ್ತಿದೆ ಎಂಬ ವಿಚಾರವು ಸರಕಾರದ ಗಮನಕ್ಕೆ ಬಂದಿದೆಯೆ ? ಯಾರನ್ನಾದರೂ ಹಿಡಿದಿದ್ದೀರ ? ಬೆಂಗಳೂರುಸಿಟಿಯಿಂದ ಹೊರಗಡೆ ಸ್ಪೇಜಿಗೆ ಹೋಗಿದೆ, ಕೇರಳಕ್ಕೆ ಹೋಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಿಂದಲೇ ತಿಳಿಯುತ್ತದೆ, ನಮ್ಮ ನಕ್ಕರೆ ಹಂಚಿಕೆಯ ವ್ಯವಸ್ಥೆ ಚೆನ್ನಾಗಿದೆಯೆಂದು. ನಮ್ಮಲ್ಲಿ ಚೆನ್ನಾಗಿಲ್ಲದಿದ್ದರೆ ನಮ್ಮಿಂದ ಹೊರಗೆ ಏಕೆ ಹೋಗಬೇಕು ? ನಮ್ಮಲ್ಲಿ ಚೆನ್ನಾಗಿಯೇ ಇದೆ. ಎಲ್ಲ ಅದು ಕದಮೆ ಇದೆಯೋ ಅಲ್ಲಗೆ ಹೊರಕ್ಕೆ ಹೋಗುತ್ತದೆ. 16 ಕೇಸುಗಳನ್ನು ಹಿಡಿದು, 4—5 ಜನಕ್ಕೆ ಶಿಕ್ಷೆಯಾಗಿದೆ. ಇನ್ನು ಕೆಲವು ಕೇಸುಗಳಲ್ಲಿ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ.

ಶ್ರೀ ಎ. ಕೃಷ್ಣಶೆಟ್ಟಿ.—ಸಕ್ಕರೆ ಕೋಟಾವನ್ನು ಜಿಲ್ಲೆಗಳಿಗೆ, ಜನಸಂಖ್ಯೆಯನ್ನು ಆಧಾರವಾಗಿ ತೆಗೆದುಕೊಂಡು ನಿರ್ಣಯಿಸಿದ್ದೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಳ್ಳುವುದಿಲ್ಲ. ಏಕೆಂದರೆ ಜನಸಂಖ್ಯೆ ಇಟ್ಟುಕೊಂಡರೆ ಕೆಲವು ಜಿಲ್ಲೆಗಳಿಗೆ ಅಲಾಟ್‌ಮೆಂಟ್ ಕಡಮೆಯಾಗುತ್ತದೆ. ಸೌತ್ ಕೆನರಾಕ್ಕೆ ಈಗ ಕೊಟ್ಟಿದ್ದರಲ್ಲಿ ಬಹುಶಃ ಅರ್ಧ ಸಿಕ್ಕುತ್ತದೆ. ಹಿಂದೆ ಷುಗರ್ ಕಂಟ್ರೋಲರ್ ಇಲ್ಲದೆ ಇದ್ದಾಗ ಎಷ್ಟೆಷ್ಟೋ ಕಳುಹಿಸುತ್ತಾ ಇದ್ದೆವು ಎಂಬ ಬಗ್ಗೆ ಲೆಕ್ಕ ಇದೆ. ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬೇಕಾಗಿರುತ್ತದೆಂದು ನೋಡುತ್ತೇವೆ. ಉತ್ತರ ಕರ್ನಾಟಕದಲ್ಲಿ ಚಹ ಕುಡಿಯುತ್ತಾರೆ, ಅವರಿಗೆ ಸಕ್ಕರೆ ಜಾಸ್ತಿ ಬೇಕು. ಹಳೆಯ ಮೈಸೂರಿನಲ್ಲಿ ಜನ ಕಾಫಿ ಕುಡಿಯುತ್ತಾರೆ, ಅದಕ್ಕೆ ಬೆಲ್ಲ ಉಪಯೋಗಿಸುತ್ತಾರೆ. ಆದ್ದರಿಂದ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಜನಗಳ ಅಭ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಜನಸಂಖ್ಯೆಯನ್ನು ತೆಗೆದುಕೊಂಡರೆ ನಮಗೆ ಬರುವ ಸಕ್ಕರೆಯಲ್ಲಿ ಮುಕ್ಕಾಲು ಭಾಗ ಕಾಫಿ ಕುಡಿಯುವ ಜಿಲ್ಲೆಗಳಿಗೇ ಹೋಗಿಬಿಡುತ್ತದೆ, ಆದರೆ ಕಾಫಿ ಕುಡಿಯುವ ಜಿಲ್ಲೆಗಳಿಗೆ ಸ್ವಲ್ಪ ಕಡಮೆ ಕೊಡುತ್ತಾ ಇದ್ದೇವೆ.

Sri J. P. SARWESH.—The release of sugar to Gulbarga District is insufficient. What are the reasons for decreasing the quota from 400 to 351 tons ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಹೆಯಾನ ಕೋಟ ಕೊಡಬೇಕಾದ್ದು ಎರಡು ಕೋಟ ಕೊಟ್ಟಿದೆ. 15—15 ದಿವಸಕ್ಕೆ ಒಂದೊಂದು ಕೋಟಾದಂತೆ ಪ್ರಾರಂಭದಲ್ಲಿ 250 ಟನ್ನು ಇದ್ದಿತು. ಅದು ಆಮೇಲೆ 400 ಟನ್ನಿಗೆ ಏರಿದೆ. ಆದರೆ ಕೆಲವು ಬಾಕಿ ಜಿಲ್ಲೆಗಳಿಗೆ ಅದರ ಅರ್ಧ ಕೋಟಾ ಸಿಕ್ಕುತ್ತಿದೆ. ಆ ಅಂಕಿ ಸಂಖ್ಯೆಗಳೊಡನೆ ಹೋಲಿಸಿ ನೋಡಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇಲ್ಲಿ ಸಕ್ಕರೆ ಬ್ಲಾಕು ಮಾರ್ಕೆಟಿನಲ್ಲಿ ಮಾರಾಟವಾಗುತ್ತಿದೆ. ರಾಜ್ಯದಲ್ಲಿ ಸಕ್ಕರೆ ಸಿಕ್ಕುತ್ತಿಲ್ಲ ಎಂದು ಎಷ್ಟು ಕಂಪ್ಲೆಂಟುಗಳು ಬಂದಿವೆ ? ಬ್ಲಾಕು ಮಾರ್ಕೆಟ್ಟಿನಲ್ಲಿ ಕಿರೋ ಒಂದಕ್ಕೆ ಎರಡೂವರೆ ರೂಪಾಯಿಯಂತೆ ತೆಗೆದುಕೊಳ್ಳುವ ಪರಿಸ್ಥಿತಿ ಇದೆ.

ಶ್ರೀ ಎಂ. ವಿ. ಕೃಷ್ಣಪ್ಪ.— ಈಗಾಗಲೆ ಆರ್—ಇಂಡಿಯ ಕನ್‌ವೆನ್‌ಷನ್ನಿನವರು ಮೈಸೂರಿನಲ್ಲಿ ಷುಗರ್ ಡಿಸ್ಟ್ರಿಬ್ಯೂಷನ್ನು ಎಲ್ಲಾ ಸಂಸ್ಥಾನಗಳಿಗಿಂತಲೂ ಚೆನ್ನಾಗಿ ನಡೆಯುತ್ತಾ ಇದೆ ಎಂದು ರಿಪೋರ್ಟು ಕೊಟ್ಟಿದ್ದಾರೆ. ಕಾರಣ ಇಷ್ಟೆ : 60 ಪರ್ಸೆಂಟು ಷುಗರ್ ಕೊ-ಆಪರೇಟೀವ್ ಸೊಸೈಟಿ ಮುಖಾಂತರ ಇದೊಂದೆ ಸ್ಟೇಟಿನಲ್ಲಿ ಡಿಸ್ಟ್ರಿಬ್ಯೂಟ್ ಮಾಡುತ್ತಾ ಇರುವುದು. ಯಾವ ಸಂಸ್ಥಾನದಲ್ಲಿಯೂ ಇಷ್ಟೊಂದು ಪ್ರಮಾಣದಲ್ಲಿ ಕೊ ಆಪರೇಟೀವ್ಸ್ ಮುಖಾಂತರ ವ್ಯವಸ್ಥೆಮಾಡಿ ಮಾರಾಟ ಮಾಡಿಲ್ಲ. ಇದೊಂದೇ ಸಂಸ್ಥಾನದಲ್ಲಿ ಶೇಕಡ 60 ರಷ್ಟು ಕೊ ಆಪರೇಟೀವ್ಸ್ ಮೂಲಕ ಹಳ್ಳಿಗಳಲ್ಲಿ ಹಂಚುತ್ತಾ ಇದ್ದೇವೆ. ಮಿಕ್ಕ ಶೇಕಡ 40ನ್ನು ಟ್ರೇಡರುಗಳಿಗೆ ಹಂಚುತ್ತಾ ಇದ್ದೇವೆ. ಬ್ಲಾಕು ಮಾರ್ಕೆಟ್ಟು ಇದೆಯೆಂದರೆ ಬೆಲ್ಲದ ಬೆಲೆ ವಿಪರೀತ ಇಳಿದುಹೋಗಿದೆ.—ಕ್ವಿಂಟಲ್ಲಿಗೆ 140 ರೂಪಾಯಿ ಇದ್ದದ್ದು 70 ರೂಪಾಯಿ ಆಗಿಹೋಗಿದೆ. ಆದ್ದರಿಂದ ಸಕ್ಕರೆಯ ಮೇಲೆ ಪ್ರೈಸರ್ ಜಾಸ್ತಿ ಇದೆ. ಮದುವೆ ಸೀಸನ್ ಆದರೂ ಸಕ್ಕರೆಯ ಬಗ್ಗೆ ಅಷ್ಟೊಂದು ಕಂಪ್ಲೆಂಟುಗಳು ಇಲ್ಲ. ನಮ್ಮ ಸಂಸ್ಥಾನದಲ್ಲಿ ಸಕ್ಕರೆಯ ಹಂಚಿಕೆ ಬಹಳ ಸಮರ್ಪಕವಾಗಿ ನಡೆಯುತ್ತಾ ಇದೆ.

ಶ್ರೀ ಪಿ. ಬಿ. ಬೊಮ್ಮಣ್ಣ.—ಹಿಂದೆ ರಿಲೀಸ್ ಮಾಡಿದ್ದಕ್ಕಿಂತ ಈಗಿನದು ಕಡಿಮೆ ಇಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಾಸ್ತಿ ಮಾಡಿದೆ. ಕಂಟ್ರೋಲ್ ಇಲ್ಲದೆ ಇರುವಾಗ ಮೈಸೂರು ಸಂಸ್ಥಾನಕ್ಕೆ ಕೇಂದ್ರಸರಕಾರದವರು ತಿಂಗಳಿಗೆ 500 ಟನ್ ರಿಲೀಸ್ ಮಾಡುತ್ತಾ ಇದ್ದರು, ಈಗ 9 ಸಾವಿರ ಟನ್ ಮಾಡುತ್ತಾ ಇದ್ದಾರೆ. ಈಗ ಜಾಸ್ತಿ ಇದೆ. ಬೆಲ್ಲದ ಬೆಲೆ ಸಕ್ಕರೆಗಿಂತ ಜಾಸ್ತಿ ಇದೆ. ಆದ್ದರಿಂದ ಸಕ್ಕರೆಯಮೇಲೆ ಬೆಲ್ಲ ತೆಗೆದುಕೊಳ್ಳುವವರದೂ ಪ್ರೈಸರ್ ಇದೆ.

ಶ್ರೀ ಆರ್. ಎ. ಕೊಪ್ಪಳ್.—ಧಾರವಾಡ ಜಿಲ್ಲೆಗೆ ಕೊಡುವ ಸಕ್ಕರೆ ಸಾಕಾಗುವುದಿಲ್ಲ. ಅಲ್ಲಿ ಡಿ.ಸಿ. ಯವರು ಜಾಸ್ತಿ ಕೊಡಬೇಕೆಂದು ಬರೆದಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಧಾರವಾಡ ಜಿಲ್ಲೆಗೆ ಎಲ್ಲ ಜಿಲ್ಲೆಗಳಿಗಿಂತಲೂ ಜಾಸ್ತಿ ಅಲಾಟ್‌ಮೆಂಟ್ ಕೊಟ್ಟಿದೆ. ಅದಕ್ಕೆ ಹೆಚ್ಚಿಗೆ ಕೊಡುವುದು ನ್ಯಾಯವಲ್ಲ.

ಶ್ರೀ ಕೆ. ಪಿ. ಗದಗ್.—ಜನಸಂಖ್ಯೆಯಮೇಲೆ ಕೊಟ್ಟರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಧಾರವಾಡಕ್ಕೆ 700-800 ಟನ್ ಕೊಡುತ್ತಾ ಇದ್ದೇವೆ. ಅದೇ ಕೋಲಾರಕ್ಕೆ 200 ಟನ್ ಕೊಡುತ್ತಾ ಇದ್ದೇವೆ. ಕೋಲಾರದಲ್ಲಿ 13 ಲಕ್ಷ ಜನಸಂಖ್ಯೆ ಇದೆ. ಜನಸಂಖ್ಯೆ ತೆಗೆದುಕೊಂಡರೆ ಕೋಲಾರಕ್ಕೆ 400 ಟನ್ ಕೊಡಬೇಕು. ನಿಮಗೆ 600 ಟನ್ ಕೊಡಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಷುಗರ್ ಕಂಪ್ಲೆಂಟು ಹಾಸನದಲ್ಲಿ ಬಹಳ ಇದ್ದರೂ 175 ಜನ್ ಕೊಟ್ಟಿದ್ದೀರಿ. ಚಿಕ್ಕಮಗಳೂರಿಗೆ ಜಾಸ್ತಿ ಕೊಡುತ್ತಾ ಇದ್ದೀರಿ. ಹಾಸನಕ್ಕೆ ಮಾತ್ರ ಈ ರೀತಿ ಅನ್ಯಾಯ ಮಾಡುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎಂ. ಎ. ಕೃಷ್ಣಪ್ಪ.—ಅಂತಹದ್ದೇನೂ ಇಲ್ಲ. ಅದಕ್ಕೆ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕೊ-ಆಪರೇಟೀವ್ ಸೊಸೈಟಿಯ ಮೂಲಕ ಸಕ್ಕರೆ ಹಂಚತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದಿರಿ. ಕೆಲವು ಕೊ-ಆಪರೇಟೀವ್ ಸೊಸೈಟಿಗಳನ್ನು ಮ್ಯಾನೇಜ್ ಮಾಡತಕ್ಕಂಥ ಜನಗಳು ಸಕ್ಕರೆಯನ್ನು ದುರುಪಯೋಗ ಮಾಡಿ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಾ ಇದ್ದಾರೆ. ಅದರಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸೊಸೈಟಿಯ ವ್ಯವಹಾರ ಮಾಡುತ್ತಾ ಇರತಕ್ಕಂಥ ಜನ ಸಕ್ಕರೆಯನ್ನು ಬ್ಲಾಕುಮಾರ್ಕೆಟ್ಟಿನಲ್ಲಿ ಮಾರುತ್ತಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಎ. ಕೃಷ್ಣಪ್ಪ.—ಅಂತಹದ್ದೇನೂ ಗಮನಕ್ಕೆ ಬಂದಿಲ್ಲ. ಅಲ್ಲಲ್ಲಿ ಹಾಗೆ ಜನರು ಸ್ವಲ್ಪ ಮಾರುತ್ತಾ ಇರಬಹುದು; ಇಲ್ಲ ಎಂದು ಹೇಳುವುದಿಲ್ಲ. ಅವರು ಯಾವಾಗಲೂ ತುಮಕೂರು ಸೊಸೈಟಿಯನ್ನು ಹಿಡಿದಿದ್ದಾರೆ. ಆದರೆ ಸಕ್ಕರೆಯ ಬಗ್ಗೆ ಕಂಪ್ಲೇಂಟು ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಸಕ್ಕರೆ ವಿತರಣೆಯನ್ನು ಪ್ರೈವೇಟ್ ಸೆಕ್ಟರ್‌ನಲ್ಲೂ ಕೊಡುತ್ತಾ ಇದ್ದೀರಿ. ಸಹಕಾರ ಸಂಘಗಳ ಮುಖಾಂತರ ಕಟ್ಟುನಿಟ್ಟಾಗಿ ವಿತರಣೆ ಮಾಡಲಕ್ಕೆ ಆಜ್ಞೆ ಹೊರಡಿಸುತ್ತೀರಾ ?

ಶ್ರೀ ಎಂ. ಎ. ಕೃಷ್ಣಪ್ಪ.—ಸಹಕಾರ ಸಂಘಗಳ ಮೂಲಕ ಶೇಕಡ 60 ಭಾಗ ಹಂಚುತ್ತಾ ಇದ್ದೇವೆ, ಇನ್ನು 40 ಭಾಗ ಮಾತ್ರ ಪ್ರೈವೇಟ್ ಸೆಕ್ಟರ್‌ನಲ್ಲಿ ಹಂಚುತ್ತಾ ಇದ್ದೇವೆ. ಪ್ರೈವೇಟ್ ಸೆಕ್ಟರ್‌ನ್ನು ಪೂರ್ತಿಯಾಗಿ ಡಿಸ್‌ರೊಕೇಟ್ ಮಾಡಬೇಡಿ ಕಂಟ್ರೋಲ್ ಇರಬಹುದು, ಇಲ್ಲದೇ ಇರಬಹುದು ಎಂದು ಗವರ್ನಮೆಂಟ್ ಆಫ್ ಇಂಡಿಯಾದವರ ಡೈರೆಕ್ಷನ್ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ನಡೆದಿಲ್ಲ ಎಂದು ಹೇಳಿದಿರಿ. ಅಲ್ಲಿ ಕೋ-ಆಪರೇಟೀವ್ ಸೊಸೈಟಿ ಅಲ್ಲದೇ ಎಷ್ಟು ಜನ ಬೇರೆಯವರಿಗೆ ಕೊಟ್ಟಿದ್ದೀರೋ ಅವರೆಲ್ಲರೂ ತಾವು ಕೊಟ್ಟ ತಕ್ಷಣ, ಮರುಗಳಿಗೆಯಲ್ಲೇ ಬ್ಲಾಕ್‌ಮಾರ್ಕೆಟ್ ಮಾಡಿಕೊಂಡಿರುವುದರಿಂದ ಜಿಲ್ಲಾಧಿಕಾರಿಗಳಿಗೂ ಕಂಟ್ರೋಲರ್ ಆಫ್ ಸಿವಿಲ್ ಸಪ್ಲೈಸ್ ಅವರಿಗೂ ಆ ಬಗ್ಗೆ ದೂರು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎ. ಕೃಷ್ಣಪ್ಪ.—ಇದನ್ನು ತಾವು ಆಗಾಗ್ಗೆ ಹೇಳುತ್ತಾ ಇದ್ದೀರಿ. ಅದರಮೇಲೆ ಕೆಲವು ಏರ್ಪಾಡುಗಳನ್ನು ಮಾಡಿ ತನಿಖೆ ನಡೆಸಿದ್ದೇವೆ. ತುಮಕೂರು ಡಿಸ್ಟ್ರಿಕ್ಟ್ ಕ್ಯಾತಸಂದ್ರದಲ್ಲಿ ಒಂದು ಕೇಸನ್ನು ಹಿಡಿದಿದ್ದರು. ಬೆಂಗಳೂರಿನಿಂದ ಬೊಂಬಾಯಿಗೆ ಹೋಗುವಾಗ ಮಧ್ಯೆ ಕ್ಯಾತಸಂದ್ರದಲ್ಲಿ ಲಾರಿಯನ್ನು ನಿಲ್ಲಿಸಿ ಅಲ್ಲಿಂದ ಸಕ್ಕರೆಯನ್ನು ತೆಗೆದುಕೊಂಡು ಹೋಗುತ್ತಾ ಇದ್ದರು. ಅದನ್ನು ಹಿಡಿದು ಹಾಕಿದ್ದೇವೆ. ಇದರಿಂದ ಬೊಂಬಾಯಿನಲ್ಲೂ ಈ ಅವ್ಯವಸ್ಥೆ ಇದೆ, ಅಲ್ಲಗಿಂತಲೂ ಬೆಂಗಳೂರಿನಲ್ಲಿ ಸ್ವಲ್ಪ ವಾಸಿ ಎಂದು ಇದರಿಂದ ಅರ್ಥವಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಕ್ಕರೆ ಕಂಟ್ರೋಲ್ ಬಂದಮೇಲೆ ಬೆಂಗಳೂರು ಸಿಟಿಯಲ್ಲಿ ಹೊಸದಾಗಿ ಕೆಲವು ಷುಗರ್ ಕ್ಯಾಂಡಿ ಕಂಪೆನಿಗಳು ಜನ್ಮತಾಳಿ ಅದಕ್ಕೆ ಹೆಚ್ಚು ಸಕ್ಕರೆ ಹೋಗಿ ಅವರು ಬ್ಲಾಕ್‌ಮಾರ್ಕೆಟ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎ. ಕೃಷ್ಣಪ್ಪ.—ಆಗಾಗ್ಗೆ ಹೊಸ ಹೊಸ ಇಂಡಸ್ಟ್ರಿಯಲಿಸ್ಟ್ಸ್ ಆ ತರಹ ಕಂಪನಿ ತೆಗೆಯುವುದಕ್ಕೆ ಸರಕಾರದವರನ್ನು ಅಪ್ರೋಚ್ ಮಾಡುತ್ತಾ ಇರುತ್ತಾರೆ. ಸಾಮಾನ್ಯವಾಗಿ ಅದಕ್ಕೆ ಅವಕಾಶ ಕೊಡುವುದಿಲ್ಲ. ಆದರೆ ಪೆಪ್ಪರ್‌ಮೆಂಟ್ ಫ್ಯಾಕ್ಟರಿ, ಫ್ರೂಟ್ ಕ್ಯಾನಿಂಗ್ ಫ್ಯಾಕ್ಟರಿ ಇಂತಹ ಇಂಡಸ್ಟ್ರೀಗಳು ಬೆಳೆಯಬೇಕಾದರೆ ಅವಕಾಶ ಕೊಡಬೇಕಾಗುತ್ತದೆ, ಅಂತಹ ಸಂದರ್ಭದಲ್ಲಿ ಅವರು ಪವರ್ ತೆಗೆದುಕೊಂಡಿದ್ದಾರೆಯೇ, ಮೆಷೀನ್ ಇದೆಯೇ ಅಥವಾ ನುಮ್ಮನೆ ಸಕ್ಕರೆ ಕೋಟಾ ಕೇಳುತ್ತಾ ಇದ್ದಾರೆಯೇ ಎಂಬುದನ್ನೆಲ್ಲಾ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ತನಿಖೆ ಮಾಡಿ ಕೆಲವು ಕೇಸುಗಳಲ್ಲಿ ಅವಕಾಶ ಮಾಡಿಕೊಡುತ್ತಾರೆ. ನನಗೆ ಜ್ಞಾಪಕವಿರುವ ಹಾಗೆ ಹೊಸದಾಗಿ ಯಾರಿಗೂ ದೊಡ್ಡ ಪ್ರಮಾಣದಲ್ಲಿ ಕೊಟ್ಟಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ಈಗ ಸಕ್ಕರೆ ವಿತರಣೆ ಸರಿಯಾಗಿಲ್ಲ; ಆದ್ದರಿಂದ ಅದನ್ನು ಐಡೆಂಟಿಟಿ ಸ್ಲಿಪ್ಸ್ ಮೇಲೆ ಪಂಚಾಯ್ತಿ ಮತ್ತು ಸಾರ್ವಜನಿಕ ಸಂಸ್ಥೆಗಳ ಮೂಲಕ ಸಕ್ಕರೆಯನ್ನು ಹಂಚಿಕೆ ಮಾಡಲು ಸರ್ಕಾರದವರು ತಿಳಿಸುತ್ತಾರೆಯೇ ?

ಶ್ರೀ ಎಂ. ಎ. ಕೃಷ್ಣಪ್ಪ.—ಬೇರೆ ಯಾವ ಕಡೆಯಲ್ಲೂ ತಕರಾರು ಇಲ್ಲ ತಕರಾರು ಇರುವುದೆಲ್ಲಾ ಬೆಂಗಳೂರಿನಲ್ಲೇ, ಐಡೆಂಟಿಟಿ ಕಾರ್ಡ್ ಇಲ್ಲದೇ ಯಾರುಬೇಕಾದರೂ ಸೊಸೈಟಿಗೆ ಹೋಗಿ ಅಲ್ಲಿ ಸಕ್ಕರೆ ಇರುವಾಗ 7-8 ಸಲ ತೆಗೆದುಕೊಳ್ಳಬಹುದು. ಐಡೆಂಟಿಟಿ ಕಾರ್ಡ್ ಇಷ್ಯೂ ಮಾಡು

ವುದರಿಂದ ತೊಂದರೆ ಏನು ಎಂದರೆ ಸಕ್ಕರೆ ತಿನ್ನದೇ ಇರುವವರಿಗೂ ಸಕ್ಕರೆ ಕೊಡಬೇಕಾಗುತ್ತದೆ. ಫಂಡಮೆಂಟರ್ ರೈಟ್ಸ್ ಪ್ರಕಾರ ಒಬ್ಬರಿಗೆ ಕೊಟ್ಟು ಇನ್ನೊಬ್ಬರಿಗೆ ಬಿಡುವುದಕ್ಕಾಗುವುದಿಲ್ಲ ಆದ್ದರಿಂದ ಸಕ್ಕರೆ ತಿನ್ನದೇ ಇರುವವರಿಗೂ ಸಕ್ಕರೆ ಕೊಡಬೇಕಾಗುತ್ತದೆ. ಆಗ ಅವರೆಲ್ಲರೂ ಸಕ್ಕರೆಯನ್ನು ತೆಗೆದುಕೊಂಡು ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಿಕೊಳ್ಳುತ್ತಾರೆ. ಆದ್ದರಿಂದ ಐಡೆಂಟಿಟಿ ಕಾರ್ಡ್ ಇಲ್ಲದೇ ಇರುವುದೇ ಒಳ್ಳೆಯದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತುಮಕೂರು ಜಿಲ್ಲೆಯಲ್ಲಿ ಅಲ್ಲಿನ ಡಿ. ಸಿ. ಅವರಿಗೂ ಈ ಷುಗರ್ ಕಂಪ್ಲೆಂಟ್ ಇದೆ ಎಂದು ಕೇಳಿದ್ದೇನೆ. ಅಂತಹ ಕೇಸನ್‌ನಲ್ಲಿ ಏನು ಮಾಡಿದ್ದೀರಿ? (ನಗು;) ತುಮಕೂರು ಜಿಲ್ಲೆಯಲ್ಲಿರುವ ಷುಗರ್ ಕಂಪ್ಲೆಂಟ್‌ನ್ನು ಮುಂದುವರಿಸುತ್ತೀರೋ ಅಥವಾ ಅಲ್ಲಿ ಸರಿಯಾಗಿ ಷುಗರ್ ಸಿಕ್ಕುವ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಷುಗರ್ ಕಂಪ್ಲೇಂಟ್ ಇರುವ ಜನ ಸಕ್ಕರೆಯನ್ನು ತೆಗೆದು ಕೊಳ್ಳುವುದೇ ಇಲ್ಲ. ತುಮಕೂರು ಡಿ. ಸಿ. ಅವರಿಗೆ ಷುಗರ್ ಕಂಪ್ಲೇಂಟ್ ಇದೆ, ಹಾಗೆ ಹೀಗೆ ಎಂದು ಈ ಅಸೆಂಬ್ಲಿಯಲ್ಲಿ ಏಕೆ ಮಾತನಾಡಬೇಕು?

Commissioning of the Sharavathy Hydro-Electric Scheme.

*Q.—99. **Sri C. R. RANGE GOWDA** (Magadi).—

Will the Government be pleased to state :—

(*a*) when the Sharavathy Hydro-Electric Scheme would be commissioned;

(*b*) how much of the total power generated is proposed to be given for use outside the State and how much inside the State;

(*c*) how much power that would be left over after the supply for use outside the State;

(*d*) whether there is any definite data with regard to the power requirements in the State;

(*e*) whether there is any agreement to give more power in the second, third and subsequent stages of the S. V. P. for outside the State?

A.—**Sri J. H. SHAMSUDDIN** (Deputy Minister for Electricity).—

(*a*) The first unit is expected to be commissioned by the middle of 1964, and the second unit is expected to be commissioned by the end of the year 1964.

(*b*) 5,000 kW of power is proposed to be supplied to Goa from the first stage of Sharavathi Power. The rest of the power will be utilised in Mysore State.

(*c*) 1,73,200 kW will be available for use inside the State from the first stage of the Sharavathy Valley Project.

(*d*) Yes, a list of consumers with their load requirement is maintained by the M. S. E. B. (100 H. P. and above).

(*e*) It has been agreed by the Mysore Government to supply power up to 20,000 kW from the second stage to Goa.

ಶ್ರೀ ಸಿ. ಆರ್. ರಂಗೇಗೌಡ.—1,73,200 ಕಿಲೋವಾಟ್ ಪವರ್ ಸಿಕ್ಕುತ್ತದೆ ಎಂದು ಹೇಳಿದ್ದೀರಿ. ಅದರಲ್ಲಿ ಇಂಡಸ್ಟ್ರಿಯರ್ ಸೆಕ್ಟರ್‌ಗೆ ಎಷ್ಟು, ಅಗ್ರಿಕರ್ಚರರ್ ಸೆಕ್ಟರ್‌ಗೆ ಎಷ್ಟು ಹಂಚಬೇಕೆಂದಿದ್ದೀರಿ?